ಇ) ಹೊಸನಗರ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ (2002–03, 2003–04 ಮತ್ತು 2004–05 ಡಿಸೆಂಬರ್ 2004 ಅಂತ್ಯಕ್ಕೆ) ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ಗ್ರಾಮವಾರು, ಫಲಾನುಭವಿವಾರು ಹಾಗೂ ಸರ್ವೆ ನಂಬರುವಾರು ವಿವರಗಳನ್ನು ಅನುಬಂಧ–2, 3, ಮತ್ತು 4 ರಲ್ಲಿ ನೀಡಿದೆ.

ಈ) ಜಿಲ್ಲೆಯಲ್ಲಿ ಈ ಅವಧಿಯಲ್ಲಿ ಕೆಳಕಂಡ ಯೋಜನೆಗಳಡಿ ಜಲಾನಯನ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ.

1) ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ
2) ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ
3) ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ
4) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ
5) ವಿಶೇಷ ಘಟಕ ಯೋಜನೆ
6) ಗಿರಿಜನ ಉಪ ಯೋಜನೆ
7) ಕಾಡಾ ಅಭಿವೃದ್ಧಿ ಯೋಜನೆ
8) ಬರ ಪರಿಹಾರ ಯೋಜನೆ
9) ಶರಾವತಿ ಟೇಲ್ ರೇಸ್ ಯೋಜನೆ
10) ಉಪ್ಪು, ಕ್ಷಾರ ಹಾಗೂ ಜೌಗು ಭೂ ಅಭಿವೃದ್ಧಿ ಯೋಜನೆ

2007 (2410): ಶ್ರೀ ಸುನೀಲ್ ವಲ್ಲಾಪುರೆ (ಶಹಾಬಾದ್)– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ಹಾಗೂ ಚಿತ್ತಾಪುರ ತಾಲ್ಲೂಕುಗಳ ಆಗ್ರೋ ಕೇಂದ್ರಗಳಿಂದ 2002–03ನೇ ಮತ್ತು 2003–04ನೇ ಸಾಲಿನಲ್ಲಿ ರೈತರಿಗೆ ಸಂಸ್ಕರಣೆ ಮಾಡಿದ ಯಾವ ಯಾವ ತಳಿಯ ಬಿತ್ತನೆ ಬೀಜಗಳನ್ನು ವಿತರಿಸಲಾಗಿದೆ ಹಾಗೂ ರಿಯಾಯಿತಿ ದರಗಳಲ್ಲಿ ವಿತರಿಸಲಾಗಿದೆಯೇ; (ವಿವರ ನೀಡುವುದು);

ಆ) ವಿತರಣೆ ಮಾಡಿದ ಬೀಜಗಳ ಪ್ರಮಾಣವೆಷ್ಟು; ಸಂಸ್ಕರಣೆ ಮಾಡಿದ ಬೇರೆ ಬೇರೆ ಬೀಜಗಳ ದರವೆಷ್ಟು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) –

ಅ) 2002–03ನೇ ಸಾಲಿನಲ್ಲಿ ಗುಲ್ಬರ್ಗಾ ಹಾಗೂ ಚಿತ್ತಾಪುರ ತಾಲ್ಲೂಕುಗಳಲ್ಲಿ ಆಗ್ರೋ ಕೇಂದ್ರಗಳು ವಿತರಣೆ ಮಾಡಿದ ಬಿತ್ತನೆ ಬೀಜಗಳ

ತಳಿವಾರು ವಿವರವನ್ನು ಪಟ್ಟಿಯಲ್ಲಿ ನೀಡಿದೆ. ಸದರಿ ಬಿತ್ತನೆ ಬೀಜಗಳನ್ನು ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ. 2003–04ನೇ ಸಾಲಿನಲ್ಲಿ ಆಗ್ರೋ ಕೇಂದ್ರಗಳ ಮುಖಾಂತರ ಬಿತ್ತನೆ ಬೀಜ ವಿತರಣೆಯಾಗಿರುವುದಿಲ್ಲ.

ಆ) ವಿತರಣೆ ಮಾಡಿರುವ ಬಿತ್ತನೆ ಬೀಜಗಳ ಪ್ರಮಾಣ ಮತ್ತು ದರಗಳ ವಿವರವನ್ನು ಪಟ್ಟಿಯಲ್ಲಿ ನೀಡಿದೆ.

2009 (2413) : ಶ್ರೀ ಸುನೀಲ್ ವಲ್ಲಾಪುರೆ (ಶಹಾಬಾದ್) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಶಹಾಬಾದ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಲ್ಲಿಯ ಬೆಳೆ ವಿಮೆಯ ಪ್ರಮಾಣವೆಷ್ಟು ;

ಆ) ಬೆಳೆ ವಿಮೆ ಪ್ರಾರಂಭಿಸಿದ ವರ್ಷ ಯಾವುದು; ರಾಜ್ಯದ ಪ್ರತಿ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಯಾವ ಯಾವ ಬೆಳೆಗೆ ವಿಮಾ ಕಂತು ಕಟ್ಟಲು ಅವಕಾಶಗಳಿವೆ;

ಇ) ಪ್ರತಿ ಹಳ್ಳಿಯಿಂದ ಬೆಳೆ ವಿಮೆಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಶಹಾಬಾದ್ ವಿಧಾನ ಸಭಾ ಕ್ಷೇತ್ರದ ವಿವರ ಒದಗಿಸುವುದು);

ಈ) ಬೆಳೆವಿಮೆ ಅರ್ಜಿಗಳು ಪುರಸ್ಕೃತಗೊಳ್ಳಲು ಇರುವ ಮಾನದಂಡಗಳೇನು; ಅವುಗಳ ಸಂಖ್ಯೆ ಎಷ್ಟು;

ಉ) ತಿರಸ್ಕೃತ ಬೆಳೆ ವಿಮೆ ಅರ್ಜಿಗಳ ಸಂಖ್ಯೆ ಎಷ್ಟು; (ತಿರಸ್ಕೃತಗೊಂಡ ಕಾರಣಗಳನ್ನು ನೀಡುವುದು);

ಊ) ಗುಲ್ಬರ್ಗಾ ಹಾಗೂ ಚಿತ್ತಾಪೂರ ತಾಲ್ಲೂಕುಗಳ ರೈತರಿಗೆ ಮುಂಗಾರು ಮತ್ತು ಹಿಂಗಾರು ಬೆಳೆಗಳ ವಿಲೇವಾರಿ ಮಾಡಿ ಹಣ ವಿತರಣೆ ಮಾಡಿರುವುದು ಎಷ್ಟು; (ತಾಲ್ಲೂಕುವಾರು ಹಾಗೂ ವರ್ಷವಾರು ವಿವರ ನೀಡುವುದು)?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) –

ಅ) ಗುಲ್ಬರ್ಗಾ ಜಿಲ್ಲೆಯ ಶಹಾಬಾದ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೂ.130.31 ಲಕ್ಷ ಬೆಳೆ ವಿಮಾ ನಷ್ಟ ಪರಿಹಾರವನ್ನು 2003ರ ಮುಂಗಾರು ಹಂಗಾಮಿನಲ್ಲಿ ವಿತರಿಸಲಾಗಿದೆ.

ಆ) ರಾಷ್ಟ್ರೀಯ ಕೃಷಿ ವಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಕೇಂದ್ರ ಸರ್ಕಾರವು 1999–2000ನೇ ಸಾಲಿನಿಂದ